**OS. 240/2014 DW2**

ದಿನಾಂಕಃ 11.06.2024
(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)

<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀಮತಿ ಜಿ.ಎಸ್.ಕೆ.., ವಕೀಲರಿಂದಃ</u>

1. ದಾವಾ ಷೆಡ್ಯೂಲ್ ಐಟಂ ನಂ. 2 ರ ಸರ್ವೆ ನಂ 2/6 ರಲ್ಲಿ ಪೂರ್ವ-ಪಶ್ಚಿಮ 50 ಅಡಿಗಳು, ಉತ್ತರ-ದಕ್ಷಿಣ 65 ಅಡಿಗಳು ಸ್ವಾಧೀನದಲ್ಲಿದ್ದು ಅದನ್ನು ಕಳದ ಹೋಲ ಎಂದು ಕರೆಯುತ್ತಿದ್ದರು ಎಂದರೆ ಸಾಕ್ಷಿ ಕಳದ ಹೋಲ ಎಂದು ಕರೆಯುತ್ತಿದ್ದರು ಸಾಕ್ಷಿ ಮುಂದುವರೆದು ಸದರಿ ಜಾಗದಲ್ಲಿ ಮನೆ ಕಟ್ಟಿದ್ದರು ಉಳಿಕೆ ಜಾಗ ಇದೆ. ದಕ್ಷಿಣದಿಂದ ಉತ್ತರಕ್ಕೆ ಸುಮಾರು 76 ಅಡಿಗಳು ಇದೆ. ನಮ್ಮ ಮಾವನವರು ಸುಮಾರು 35-40 ವರ್ಷಗಳಿಂದ ಹಿಂದೆ ಮನೆ ಕಟ್ಟಿದ್ದಾರೆ. ಮನೆಕಟ್ಟಲು ಪರವಾನಿಗೆ ಪಡೆದುಕೊಂಡಿದಾರೋ  ಇಲ್ಲವೋ ನನಗೆ ಗೊತ್ತಿಲ್ಲ. ನಮ್ಮ ಮನೆಯ ಹಿಂದೆ ವಾದಿ ರವರ ಮನೆ ಇದೆ ಎಂದರೆ ಸರಿ. ವಾದಿ ರವರ ಮನೆಯ ನಂತರ ಖಾಲಿ ಜಾಗ ಇದ್ದು ಅದರಲ್ಲಿ ವಾದಿ ವ್ಯವಸಾಯ ಮತ್ತು ಹಸುಗಳನ್ನು ಕಟ್ಟಿಹಾಕಿಕೊಂಡಿದ್ದಾರೆ ನನಗೆ ಗೊತ್ತಿಲ್ಲ. ವಾದಿರವರ ಮನೆಗೆ ಹೋಗಲು 3 ಅಡಿ ಜಾಗ ಬಿಟ್ಟದ್ದೇವೆ. ನಾವು ಬಿಟ್ಟಿರುವ 3 ಅಡಿ ಜಾಗದ ಪೂರ್ವದ ಕಡೆ ಬೆಳ್ಳುಬ್ಬೆಗೌಡರು ಸಹ 3 ಅಡಿ ಜಾಗ ಬಿಟ್ಟಿದ್ದು ಒಟ್ಟು 6 ಅಡಿ ಓಡಾಲು ಜಾಗ ಇದೆ.

2. ನಾವು ಪಂಚಾಯಿತಿಪಾರಿಕತ್ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇವೆ. ಪಶ್ಚಿಮಕ್ಕೆ ಓಡಾಲು 15 ಅಡಿ ಜಾಗ ಬಿಡಲಾಗಿದೆ ಎಂದರೆ ಸರಿಯಲ್ಲ. ಪಾರ್ವದ ಕಡೆ 1 ಅಡಿ ಜಾಗ ಸಹ ಇಲ್ಲ ಎಂದರೆ ಸರಿಯಲ್ಲ.  ಬಿಳ್ಳುಬ್ಬೆಗೌಡರು ಸರ್ವೇ ಮಾಡಿಸಿದಾಗ ನೀವು ಪೂರ್ವಕ್ಕೆ ಯಾವುದೇ ಜಾಗ ಬಿಟ್ಟಿರುವುದು ಕಂಡು ಬರುತ್ತಿದೆ ಎಂದರೆ ಸಾಕ್ಷಿ ನಮಗೆ ನೋಟೀಸ್ ನೀಡಿಲ್ಲ ಎಂದು ನುಡಿಯುತತಾರೆ. ಉತ್ತರದ ಕಡೆ ಕ್ರಾಂಪೌಂಡ್ ನಿರ್ಮಾಣ ಮಾಡಿ ಉಳಿದ 3 ಕಡೆಯೂ ಫೆನ್ಸಿಂಗ್ ಹಾಕಿಕೊಂಡು ವಾದಿ ಮನೆಗ ಓಡಾಲು ಜಾಗ ಬಿಟ್ಟಿಲ್ಲ ಎಂದರೆ ಪೂರ್ವದ ಕಡೆ ಜಾಗ ತಿರುಗಾಡಲು ಬಿಟ್ಟು ಉಳಿದ ನಮ್ಮ ಜಾಗದ ಫೆನ್ಸಿಂಗ್ ಹಾಕಿಕೊಂಡಿದ್ದೇವೆ. ನಾವು

ನ್ಯಾಯಾಲಯಕ್ಕೆ ಮೂಲ ದಾಖಲಾತಿಯನ್ನು ಹಾಜರುಪಡಿಸಿದ್ದೇವೆ. 35-40 ವರ್ಷಗಳಿಂದ ನಿಮ್ಮ ಮಾವನವರು ಮನೆ ಕಟ್ಟಿಕೊಂಡು ವಾಸವಾಗಿದ್ದು ಈ ಬಗ್ಗೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ, ನೀವು ಹಾಜರುಪಡಿಸಿರುವ ದಾಖಲಾತಿಗಳೆಲ್ಲವೂ 2008- 09 ರನಂತರದ ದಾಖಲಾತಿಗಳು ಎಂದರೆ ಸಾಕ್ಷಿ ನಾನು ದಾಖಲಾತಿಗಳನ್ನು ಹೊಂದಿಸಲು ಬಹಳಷ್ಟು ಓಡಾಡಿದ್ದು ಸಿಗದ ನಂತರ, ಬೆಸ್ಕಾಂನಲ್ಲಿ ವಿದ್ಯುತ್ ಸಂಪರ್ಕ ಪಡೆಯುವ ಸಮಯದಲ್ಲಿ ನೀಡಿರುವ ದಾಖಲಾತಿಯನ್ನು ಹಾಜರುಪಡಿಸಿದ್ದೇನೆ.

3. ದಾವಾ ಸ್ವತ್ತು ಐಟಂ ನಂ.2 ರ ಸರ್ವೆ ನಂ.2/06 ರ ಸ್ವತ್ತು ನಮ್ಮ ಮಾವನವರ ಹೆಸರಿನಲ್ಲಿ ಇಲ್ಲದೇ ಇದ್ದರೂ ಸಹ ಪಂಚಾಯಿತಿಯವರ ಜೊತೆ ಷರೀಕ್ಕಾಗಿ ದಾಖಲಾತಿ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿ ಡಿ 3 ರ ಪ್ರಕಾರ ಸರ್ವೆ ನಂ.2/06 ರ ಸ್ವತ್ತು ವಾದಿರವರ ಹೆಸರಿಗೆ ಖಾತೆಯಾಗಿದೆ ಎಂದರೆ ಸಾಕ್ಷಿ ಕಂದಾಯ ಇಲಾಖೆಯವರ ತಪ್ಪಿನಿಂದ ಆಗಿದೆ ಎಂದು ನುಡಿಯುತ್ತಾರೆ. ಈ ಬಗ್ಗೆ ಯಾವುದೇ ಸಂಬಂಧಪಟ್ಟ ಪ್ರಾಧಿಕಾರದ ಪ್ರಶ್ನೆ ಮಾಡಿಲ್ಲ. ನಿಡಿ 3 ರ ಆಧಾರದ ಮೇಲೆ ನಿ ಪಿ 1 ವಾದಿರವರ ಹೆಸರಿಗೆ ಆಗಿದೆ ಎಂದರೆ ಸಾಕ್ಷಿ ಕಂದಾಯ ಇಲಾಖೆಯವರ ತಪ್ಪಿನಿಂದ ಆಗಿರುವುದು ಎಂದು ನುಡಿಯುತ್ತಾರೆ.

4. ವಾದಿರವರ ಸೊಸೆ ಯಶೋಧಮ್ಮ ರವರು ವಿಭಾಗ ಕೋರಿ ದಾವೆ ಸಲ್ಲಿಸಿದರು ಎಂದರೆ ಗೊತ್ತಿಲ್ಲ. ಒಎಸ್ 58/2007 ರಂತೆ ದಾವೆ ಸಲ್ಲಿಸಿ ಸದರಿ ದಾವೆಯಲ್ಲಿ ವಾದಿರವರ ಮಗನ ಪರ ಡಿಕ್ರಿಯಾಗಿದ್ದು ಅದರಂತೆ ಖಾತೆಯೂ ಸಹ ಅವರ ಹೆಸರಿಗೆ ಆಗಿದೆ ಎಂದರೆ ಗೊತ್ತಿಲ್ಲ. ಈ ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರೂ ಸಹ ವಾದಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. 10 ವರ್ಷಗಳ ಹಿಂದೆ ವಾದಿರವರ ಮಗನಿಗೆ ಅಪಘಾತವಾಗಿದೆ ಎಂದರೆ ಸರಿ. ಆಗಿನಿಂದ ಅವರ ಮಗ ಬುದ್ಧಿಮಾಂದ್ಯ ಆಗಿರುವ ಕಾರಣ ಅದನ್ನು ದುರುಪಯೋಗಪಡಿಸಿಕೊಂಡು ಅವರಿಗೆ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

6. ನಿಡಿ 35 ಸೃಷ್ಟಿ ಮಾಡಿಕೊಂಡಿರುವಂತಹ ದಾಖಲೆ ಎಂದರೆ ಸರಿಯಲ್. ನಮ್ಮ ಮಾವನವರ ಹೆಸರು ಓದೇಗೌಡ, ಅವರು ಮಿಲಿಟರಿಯಲ್ಲಿ ಕೆಲಸ ಮಾಡಿದ ಕಾರಣ ಅವರನ್ನು ಮಿಲಿಟರಿ ಓದೇಗೌಡ ಎಂದು ಕರೆಯುತ್ತಾರೆ. ಯಾವುದೇ ಮೂಲ ದಾಖಾಲಾತಿ ಆಧಾರದ ಮೇಲೆ ಖಾತೆ ಮಾಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಮ್ಮ ಮಾವನವರ ಹೆಸರಿಗೆ ದಾವಾ ಐಟಂ ನಂ 2 ರ ಸ್ವತ್ತು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಬಿ.ಎನ್.ಉಷಾರಾಣಿ)
ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,
ಚನ್ನಪಟ್ಟಣ.